# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

## ಸಿ.ಸಿ. ಸಂಖ್ಯೆ: 320/2014

| | | | |
|---|---|---|---|
| ಸಾಕ್ಷಿದಾರರ ಹೆಸರು | ಜೆ ಎ ಕುಮಾರ್ | ಪ್ರಮಾಣ ಮಾಡಿದ ದಿನಾಂಕ | 28.07.2023 |
| ತಂದೆಯ ಹೆಸರು | ಲೇ. ಬಿ ಕೆ ಜಯರಾಂ | | |
| ವಯಸ್ಸು | 65 ವರ್ಷ | | |
| ವೃತ್ತಿ | ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು | ಚಾಸಾ | 7 |
| ವಾಸಸ್ಥಳ | ಮೈಸೂರು | ಫ್ರಾಸಾ | 4 |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ದಿಃ 04.12.2008 ರಿಂದ 31.12.2010 ರವರೆಗೆ ಬಂಡೀಪುರದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಮದ್ದೂರು ವಲಯ ಅರಣ್ಯಾಧಿಕಾರಿಯಾದ ಚಾಸಾ 5 ರವರು ಅವರು ದಾಖಲಿಸಿದ ಅರಣ್ಯ ಮೊಕದ್ದಮೆ ಸಂಖ್ಯೆ 07/2008-09 ರ ಕಡತಗಳನ್ನು ನನಗೆ ವಹಿಸಿದ್ದು ನಂತರ ನಾನು ಅದನ್ನು ಸ್ವೀಕರಿಸಿ ಕೂಲಂಕುಷವಾಗಿ ಪರಿಶೀಲನೆ ಮಾಡಿದಾಗ, ದಿಃ 30.11.2008 ರಂದು ಮದ್ದೂರು ವಲಯದ ವನ ಪಾಲಕರಾದ ಚಾಸಾ 1 ಮತ್ತು ಅವರ ಸಿಬ್ಬಂದಿಗಳು ರಾಷ್ಟ್ರೀಯ ಹೆದ್ದಾರಿ 212 ಕ್ಕೆ ಹೊಂದಿಕೊಂಡಂತೆ ಮದ್ದೂರು ವಲಯ ಅರಣ್ಯ ಪ್ರದೇಶವಾದ ಬಿದಿರುತಾಳಕಟ್ಟೆ ಅರಣ್ಯ ಪ್ರದೇಶದಲ್ಲಿ ಗಸ್ತು ಮಾಡುವಾಗ ಸ್ಥಳದಲ್ಲಿ ಒಂದು ರಕ್ತಸಿಕ್ತವಾದ ಒಂದು ಹತ್ಯೆಯಾದ

ಜಿಂಕೆಯ ಎರಡು ಕಾಲುಗಳನ್ನು , ಜಿಂಕೆಯ ಹೊಟ್ಟೆ ಭಾಗದಿಂದ ಕಿತ್ತು ಬಿಸಾಕಿದ ಕರುಳನ್ನು ಕಂಡು ಸ್ಥಳ ಪರಿಶೀಲನೆ ಮಾಡಿ ಮಹಜರ್ ಮಾಡಿ ಅರಣ್ಯ ಮೊಕದ್ದಮೆ ದಾಖಲು ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ. ನಂತರ ಅದೇ ದಿನ ಕೇರಳ ರಾಜ್ಯದ ಸುಲ್ತಾನ್ ಬತೇರಿಯ ಅರಣ್ಯ ಇಲಾಖೆಯ ಸಿಬ್ಬಂದಿಗಳು ನಾಲ್ಕು ಆರೋಪಿಗಳನ್ನು ಮದ್ದೂರು ವಲಯಕ್ಕೆ ಕರೆದುಕೊಂಡು ಬಂದು ಅಲ್ಲಿನ ಪ್ರಕರಣದ ಈ ಆರೋಪಿಗಳು ನೀಡಿದ ಸ್ವ ಇಚ್ಛಾ ಹೇಳಿಕೆಯ ಮೂಲಕ ಮದ್ದೂರು ಅರಣ್ಯ ವಲಯದಲ್ಲಿ ಒಂದು ಜಿಂಕೆಯನ್ನು ಹತ್ಯೆ ಮಾಡಿರುವುದು ನಿಜವೆಂದು ಒಪ್ಪಿಕೊಂಡಿದ್ದಾರೆಂದು ಅವರನ್ನು ಸ್ಥಳ ಪರಿಶೀಲನೆಗಾಗಿ ನಮ್ಮ ವಲಯದ ಸಿಬ್ಬಂದಿಗಳಿಗೆ ತಿಳಿಸಿ ನಂತರ ಸ್ಥಳ ಪರಿಶೀಲನೆಗೆ ಕರೆದುಕೊಂಡು ಹೋಗಿರುವುದಾಗಿ, ನಂತರ ಸ್ಥಳ ಪರಿಶೀಲನೆ ಮಾಡಿದಾಗ ನಮ್ಮ ಮದ್ದೂರು ವಲಯದಲ್ಲಿ ಪ್ರಕರಣ ದಾಖಲು ಮಾಡಿರುವ ಜಿಂಕೆಯನ್ನು ಕೊಂದ ಸ್ಥಳ ಮತ್ತು ಕೇರಳ ರಾಜ್ಯದ ಅರಣ್ಯ ಇಲಾಖೆಯವರು ಮಹಜರ್ ಮಾಡುವಾಗ ಆರೋಪಿಗಳು ಸ್ವ ಇಚ್ಛಾ ಹೇಳಿಕೆಯ ಮೇರೆಗೆ ನೀಡಿದ ಮತ್ತು ತೋರಿಸಿದ ಸ್ಥಳ ಒಂದೇ ಆಗಿತ್ತು.

ನಂತರ ಮಾರನೇ ದಿನ ನಮ್ಮ ವಲಯ ಅರಣ್ಯಾಧಿಕಾರಿಗಳು ಇದರ ಬಗ್ಗೆ ಕೂಲಂಕುಷವಾಗಿ ತನಿಖೆ ಮಾಡಲು ಅಂದರೆ ನಮ್ಮ ಮದ್ದೂಮ ಅರಣ್ಯ ವಲಯದಲ್ಲಿ ಜಿಂಕೆಯ ಹತ್ಯೆಯಾಗಿದ್ದ ಕಾರಣ ಆ ಆರೋಪಿಗಳನ್ನು ಪಡೆಯುವುದು ಅತ್ಯಾವಶ್ಯಕವಾದ ಕಾರಣ ಕೇರಳ ರಾಜ್ಯದ ಸುಲ್ತಾನ್ ಬತೇರಿಯ ಅರಣ್ಯ ಕಛೇರಿಗೆ ಹೋಗಿ ಅಲ್ಲಿ ಸಂಬಂಧಪಟ್ಟ ದಾಖಲಾತಿಗಳನ್ನು ಅದು ಮಲಯಾಳಂ ಭಾಷೆಯಲ್ಲಿ ಇದ್ದುದರಿಂದ ನಮ್ಮಲ್ಲಿ ಅರಣ್ಯ ರಕ್ಷಕರಾದ ಚಾಸಾ 3 ರವರಾದ ಶ್ರೀ ಪ್ರೇಮದಾಸ್ ರವರ ಮಾತೃಭಾಷೆ ಮಲಯಾಳಂ ಆದ ಕಾರಣ ಅವರ ಮೂಲಕ ಮಲಯಾಳಂ ಭಾಷೆಯಿಂದ ಕನ್ನಡ ಭಾಷೆಗೆ ದಾಖಲೆಗಳನ್ನು ತರ್ಜುಮೆ ಮಾಡಿಕೊಂಡು ಮುಂದಿನ ಕ್ರಮವನ್ನು ತೆಗೆದುಕೊಳ್ಳಲು, ನಾಲ್ಕು ಆರೋಪಿಗಳ ಯುಟಿಪಿ ಸಂಖ್ಯೆಯನ್ನು ಪಡೆದು, ಗುಂಡ್ಲುಪೇಟೆ ಘನ ನ್ಯಾಯಾಲಯದಿಂದ ಆರೋಪಿಗಳ ಬಾಡಿ ವಾರೆಂಟ್ ಆದೇಶವನ್ನು ಪಡೆದು ನಂತರ ಕೇರಳ ರಾಜ್ಯದಿಂದ ನಮ್ಮ ರಾಜ್ಯಕ್ಕೆ ವಿಚಾರಣೆ ನಡೆಸಲು ಮದ್ದೂರು ವಲಯ ಅರಣ್ಯಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಬಂದು ವಿಚಾರಣೆ ಮಾಡಲಾಗಿರುತ್ತದೆ. ಆರೋಪಿ 1 ರಿಂದ 4 ರವರಾದ ಅಬ್ದುಲ್ ರೆಹಮಾನ್, ಮೊಹಮ್ಮದ್ ಕುಟ್ಟಿ, ಅಬ್ದುಲ್ ಮಜೀದ್, ಪೋಕರ್ ರವರ ಹೇಳಿಕೆಗಳನ್ನು ಪಡೆದಿದ್ದು ಅವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ತಪ್ಪೊಪ್ಪಿಗೆ ಮಾಡಿಕೊಂಡಿರುತ್ತಾರೆ. ಈ ಕೃತ್ಯವನ್ನು ನಾನೇ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ.

ದಿಃ 29.11.2008 ರಂದು ಗುಂಡ್ಲುಪೇಟೆಗೆ ಬಂದು ತಮ್ಮ ಕೆಲಸ ಕಾರ್ಯಗಳನ್ನು ಮುಗಿಸಿಕೊಂಡು ರಾತ್ರಿ ವೇಳೆಯಲ್ಲಿ ಪುನಃ ಕೇರಳ ರಾಜ್ಯಕ್ಕೆ ಹೋಗುವಾಗ ರಾಷ್ಟ್ರೀಯ 212 ರ ಸಮೀಪ ಮದ್ದೂರು ವಲಯದ ಬಿದಿರುತಾಳಕಟ್ಟೆ ಅರಣ್ಯ ಪ್ರದೇಶವಾದ ರಸ್ತೆಗೆ ಹೊಂದಿಕೊಂಡಂತಹ ಅರಣ್ಯದಲ್ಲಿ ಒಂದು ದೊಡ್ಡ ಜಿಂಕೆಯ ಹಿಂಡು ಮೇಯುತ್ತಿರುವಾಗ ತಮ್ಮ ವಾಹನವಾದ ಬಿಳಿ ಅಂಬಾಸಿಡರ್ ಕಾರ್ ಕೆಎಲ್ 10 ಇ 5072 ನಲ್ಲಿ ಒಂದು ಕಳ್ಳ ಬಂದೂಕನ್ನು ಕಾರಿನಿಂದ ತೆಗೆದು 1 ನೇ ಆರೋಪಿಯು ಆ ಜಿಂಕೆಯ ಹಿಂಡಿನ ಮೇಲೆ ಬಂದೂಕು ಹಾರಿಸಿದ್ದು, ಆ ವೇಳೆಯಲ್ಲಿ ಒಂದು ಜಿಂಕೆ ಸ್ಥಳದಲ್ಲೇ ಹತ್ಯೆಯಾಗಿದ್ದು ನಂತರ , 1 ನೇ ಆರೋಪಿ ಕಾರಿನಿಂದ ಇಳಿದು, 3 ನೇ ಆರೋಪಿಯ ಟಾರ್ಚಿನ ಬೆಳಕಿನ ಸಹಾಯದಿಂದ ಸ್ಥಳಕ್ಕೆ ಹೋಗಿ ಹತ್ಯೆಯಾದ ಜಿಂಕೆಯ ಕತ್ತನ್ನು ಕತ್ತರಿಸಿ, ಕಾಲುಗಳನ್ನು ತುಂಡರಿಸಿ, ಬಾಕುವಿನಿಂದ ಕರಳನ್ನು ಕತ್ತರಿಸಿ ಬಿಸಾಕಿ, ಚರ್ಮ ಸಹಿತ ಜಿಂಕೆಯ ಮಾಂಸವನ್ನು ಕಾರಿನ ಹಿಂಭಾಗದ ಡಿಕ್ಕಿಗೆ ಹಾಕಿ ಕೇರಳಕ್ಕೆ ಹೋಗಿದ್ದೇವೆ ಎಂಬುದಾಗಿ ಒಪ್ಪಿಕೊಂಡಿರುತ್ತಾರೆ.

ಕೇರಳ ರಾಜ್ಯಕ್ಕೆ ಹೋದ ನಂತರ ಸುಲ್ತಾನ್ ಬತೇರಿಯ 2 ನೇ ಆರೋಪಿ ಮೊಹಮ್ಮದ್ ಕುಟ್ಟಿ ರವರ ಮನೆಯ ಮುಂಭಾಗ ಕಾರನ್ನು ನಿಲ್ಲಿಸಿ ಆ ಜಿಂಕೆಯ ಮಾಂಸವನ್ನು ಮನೆಯೊಳಗೆ ತೆಗೆದುಕೊಂಡು ಹೋಗಿ ಚರ್ಮವನ್ನು ಸುಲಿದು ಮಾಂಸವನ್ನು ಕತ್ತರಿಸುವಾಗ ಕೇರಳ ರಾಜ್ಯದ ಅರಣ್ಯ ಇಲಾಖೆಯವರು ಅವರಿಗೆ ದೊರೆತ ಖಚಿತ ಮಾಹಿತಿಯಿಂದ ಆ ಮನೆಗೆ ಬಂದು ಅವರನ್ನು ದಸ್ತಗಿರಿ ಮಾಡಿ ಸ್ಥಳದಲ್ಲಿದ್ದಂತಹ ಜಿಂಕೆ ಮಾಂಸ, ಬಾಕು, ತೂಕದ ತಕ್ಕಡಿ ಮತ್ತು ಮೂರು ಬಟ್ಟುಗಳು, ಬಿಳಿ ಅಂಬಾಸಿಡರ್ ಕಾರು, 2 ಟಾರ್ಚ್ ಮತ್ತು ಇತರೆ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡು, ಕೇರಳ ಅರಣ್ಯ ಮೊಕದ್ದಮೆ ಸಂಖ್ಯೆ 14/2008-09 ರಂತೆ ದಾಖಲಿಸಿ ನಂತರ ಅವರನ್ನು ನ್ಯಾಯಾಂಗ ಬಂಧನಕ್ಕೆ ನೀಡಿರುತ್ತಾರೆ, ಈ ಬಗ್ಗೆ ಒಪ್ಪಿಕೊಂಡಿರುತ್ತಾರೆ. ನಂತರ ಈ ಅಮಾನತ್ತು ಪಡಿಸಿಕೊಂಡಂತಹ ಮಾಲುಗಳನ್ನು ಕರ್ನಾಟಕ ಅರಣ್ಯ ಇಲಾಖೆಯವರು ನ್ಯಾಯಾಲಯದ ಆದೇಶ ಪಡೆದ ನಂತರ ನಮ್ಮ ವಶಕ್ಕೆ ನೀಡಿರುತ್ತಾರೆ. ನನ್ನ ಮುಂದೆ ಈ ಜನ ಆರೋಪಿಗಳು ಸ್ವ ಹೇಳಿಕೆಯನ್ನು ನೀಡಿರುತ್ತಾರೆ. ನಂತರ ನಾನು ಈ ಸ್ವ ಇಚ್ಛಾ ಹೇಳಿಕೆಯ ಮೇರೆಗೆ ತನಿಖೆ ಕೈಗೊಂಡು ನಂತರ ಅರಣ್ಯ ಕಾಯ್ದೆ ಯಡಿಯಲ್ಲಿ ಅಂತಿಮ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತೇನೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ನಿವೇದಿಸಿಕೊಂಡಿರುತ್ತೇನೆ,

ಸಾಕ್ಷಿಯು ಆರೋಪಿಗಳು ನೀಡಿದ ನಾಲ್ಕು ಸ್ವ ಇಚ್ಛಾ ಹೇಳಿಕೆಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ನಿಪಿ 6 ರಿಂದ 9 ಎಂದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರ್ತಿಸಿದ ಕಾರಣ ಅವುಗಳನ್ನು ನಿಪಿ 6(ಎ) ಯಿಂದ 9(ಎ) ಎಂದು ಗುರ್ತಿಸಲಾಯಿತು. 1 ನೇ ಆರೋಪಿಯ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 6(ಬಿ) ಯಿಂದ 9(ಬಿ) ಎಂದು ಗುರ್ತಿಸಲಾಯಿತು. ನಂತರ ಚಾಸಾ 1 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸುಲ್ತಾನ್ ಬತೇರಿ ನ್ಯಾಯಾಲಯದ ಪ್ರತಿಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ನಿಪಿ 10 ಮತ್ತು 11 ಎಂದು, ತನ್ನ ದೃಢೀಕರಣವನ್ನು ನಿಪಿ 10(ಎ) ಮತ್ತು 11(ಎ) ಎಂದು ಗುರ್ತಿಸಲಾಯಿತು. ಸುಲ್ತಾನ್ ಬತೇರಿ ನ್ಯಾಯಾಲಯಕ್ಕೆ ಸಲ್ಲಿಸಿರುವ ಮು.ಮಾ ಗಳ ಕ್ರಮಸಂಖ್ಯೆಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 12 ಎಂದು, ಸಾಕ್ಷಿಯ ದೃಢೀಕರಣವನ್ನು ನಿಪಿ 12(ಎ) ಎಂದು ಗುರ್ತಿಸಲಾಯಿತು. ಸುಲ್ತಾನ್ ಬತೇರಿಯ ಅರಣ್ಯ ವಲಯದವರು ನೀಡಿರುವ ಮು.ಮಾ ಗಳ ಲಿಸ್ಟ್‌ನ ಮಹಜರನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 13 ಎಂದು, ಸಾಕ್ಷಿಯು ಅದನ್ನು ದೃಢೀಕರಿಸಿದ್ದು ಅದನ್ನು ನಿಪಿ 13(ಎ) ಎಂದು, ಮತ್ತೊಂದನ್ನು ನಿಪಿ 14, 14(ಎ) ಎಂದು, ಕೇರಳ ರಾಜ್ಯದ ಅರಣ್ಯ ಇಲಾಖೆಯವರು ಮಾಲುಗಳನ್ನು ವಹಿಸಿದ ನಂತರ ಪಡೆದ ಹಿಂಬರಹದ ಪ್ರತಿಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ನಿಪಿ 15 ಮತ್ತು 16, 15(ಎ), 16(ಎ) ಎಂದು, ಸಾಕ್ಷಿಯು ನಿಪಿ 1 ರ ದೃಢೀಕರಣ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 1(ಸಿ) ಎಂದು, ನಿಪಿ 2 ರ ದೃಢೀಕರಣ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 2(ಬಿ) ಎಂದು, ನಿಪಿ 3 ರ ದೃಢೀಕರಣ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 3(ಹೆಚ್) ಎಂದು ಗುರ್ತಿಸಲಾಯಿತು. ಸಾಕ್ಷಿಯು ನಿಪಿ 4 ರ ಫೋಟೋವನ್ನು ನೋಡಿ ಇದೇ ಅಂಬಾಸಿಡರ್ ಕಾರ್ ಎಂದು ನುಡಿಯುತ್ತಾರೆ. ಸಾಕ್ಷಿಯು ಅರಣ್ಯ ಪ್ರದೇಶದ ಘಟನಾ ಸ್ಥಳದ ನಕಾಶೆಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 17 ಎಂದು, ಸಾಕ್ಷಿ ದೃಢೀಕರಿಸಿದ್ದು ಅದನ್ನು ನಿಪಿ 17(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ನಾಲ್ಕು ಫೋಟೋಗಳನ್ನು ನೋಡಿ ಸ್ಥಳದಲ್ಲಿ ಇದ್ದ ರಕ್ತ ಕಲೆಗಳ ಫೋಟೋ ಮತ್ತು ಜಿಂಕೆಯ ಕತ್ತರಿಸಿದ ಕಾಲುಗಳ ಫೋಟೋಗಳನ್ನು ನೋಡಿ ಮತ್ತು ಸ್ಥಳದಲ್ಲಿ ಇದ್ದ ಕರಳಿನ ಫೋಟೋಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ನಿಪಿ 18 ರಿಂದ 21 ಎಂದು ಗುರ್ತಿಸಲಾಯಿತು. ಸಾಕ್ಷಿಯು ಘಟನಾ ಸ್ಥಳವು ಅರಣ್ಯ ಪ್ರದೇಶಕ್ಕೆ ಬರುತ್ತದೆ ಎಂದು ತೋರಿಸಲು

ನೋಟೀಫಿಕೇಷನನ್ನು ಹಾಜರು ಮಾಡಿದ್ದೇನೆ ಎಂದು ನೋಡಿ ಗುರ್ತಿಸಿದ್ದು ಅದನ್ನು ನಿಪಿ 22 ಎಂದು , ಸಾಕ್ಷಿಯ ದೃಢೀಕರಣವನ್ನು ನಿಪಿ 22 (ಎ) ಎಂದು ಗುರ್ತಿಸಲಾಯಿತು.

ಸಾಕ್ಷಿಯು ಕೇರಳ ರಾಜ್ಯದ ಅರಣ್ಯಾಧಿಕಾರಿಗಳು ಮಾಡಿದ ಕೇರಳ ಭಾಷೆಯಲ್ಲಿರುವ ಮಹಜರನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 23 ಎಂದು, ತರ್ಜುಮೆಗೊಂಡ ಮಹಜರ್ ನ ಪ್ರತಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 23 ಎ ಎಂದು, ದಿಃ 30.11.2008 ರಂದು ಕೇರಳ ಅರಣ್ಯ ಇಲಾಖೆಯವರು ಮಾಡಿದ ಮುಂದುವರೆದ ಮಹಜರನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 24 ಎಂದು, ನಿಪಿ 24 ರ ಕನ್ನಡಕ್ಕೆ ಅನುವಾದವಾದ ತರ್ಜುಮೆ ಪ್ರತಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 24(ಎ) ಎಂದು, ಸಾಕ್ಷಿಯು ಮತ್ತೊಂದು ಮುಂದುವರೆದ ಮಹಜರ್ ನ ಪ್ರತಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 25 ಎಂದು, ತರ್ಜುಮೆ ಪ್ರತಿಯನ್ನು 25(ಎ) ಎಂದು ಗುರ್ತಿಸಲಾಯಿತು. 1 ನೇ ಆರೋಪಿ ಅಬ್ದುಲ್ ರೆಹಮಾನ್ ಕೇರಳ ರಾಜ್ಯದ ತನಿಖಾಧಿಕಾರಿಗಳಿಗೆ ನೀಡಿದ ಸ್ವ ಇಚ್ಛಾ ಹೇಳಿಕೆಯನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ 26 ಎಂದು, ತರ್ಜುಮೆ ಪ್ರತಿಯನ್ನು 26(ಎ) ಎಂದು, 3 ನೇ ಆರೋಪಿ ಕೇರಳ ರಾಜ್ಯದ ತನಿಖಾಧಿಕಾರಿಗಳಿಗೆ ನೀಡಿದ ಸ್ವ ಇಚ್ಛಾ ಹೇಳಿಕೆಯನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ 27 ಎಂದು, ತರ್ಜುಮೆ ಪ್ರತಿಯನ್ನು 27(ಎ) ಎಂದು, 2 ನೇ ಆರೋಪಿ ಕೇರಳ ರಾಜ್ಯದ ತನಿಖಾಧಿಕಾರಿಗಳಿಗೆ ನೀಡಿದ ಸ್ವ ಇಚ್ಛಾ ಹೇಳಿಕೆಯನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ 28 ಎಂದು, ತರ್ಜುಮೆ ಪ್ರತಿಯನ್ನು 28(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ಈ ಎಲ್ಲಾ ಸ್ವ ಹೇಳಿಕೆ ಮತ್ತು ಮಹಜರನ್ನು ಕೇರಳ ರಾಜ್ಯದ ಅರಣ್ಯ ಇಲಾಖೆಯವರು ನಮ್ಮ ವಲಯ ಕಛೇರಿಗೆ ವಹಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಫಾರಂ ನಂಬರ್ 20 ರ ದೃಢೀಕೃತ ಪ್ರತಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 29 ಎಂದು ದೃಢೀಕೃತ ಸಹಿಯನ್ನು ನಿಪಿ 29(ಎ) ಎಂದು ಗುರ್ತಿಸಲಾಯಿತು.

ಆರೋಪಿಗಳನ್ನು ನೋಡಿದರೆ ಗುರ್ತಿಸಬಲ್ಲೆ. ಈ ದಿನ 1 ಮತ್ತು 2 ನೇ ಆರೋಪಿಗಳು ಹಾಜರಿದ್ದು ನೋಡಿ ಗುರ್ತಿಸಿರುತ್ತಾರೆ. 3 ನೇ ಆರೋಪಿ ಗೈರು ಹಾಜರಿದ್ದು ಗುರ್ತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ. ವಿನಾಯಿತಿ ಅರ್ಜಿಯನ್ನು ಪುರಸ್ಕರಿಸಲಾಯಿತು. 4 ನೇ ಆರೋಪಿ ಮೃತಪಟ್ಟಿದ್ದು ಅವರನ್ನು ನೋಡಿದರೆ ಗುರ್ತಿಸಬಲ್ಲೆ

ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ 1 ರಿಂದ 10 ನ್ನು ನೋಡಿ ಗುರ್ತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**ಪಾಟೀ ಸವಾಲು :– ಮಾನ್ಯ ಎಪಿಪಿಯವರಿಂದ :–**

ಕೇರಳ ರಾಜ್ಯದಲ್ಲಿ ಮಾಂಸ ಕಡಿಯಲು 2 ನೇ ಆರೋಪಿಯು ಮರದ ತುಂಡನ್ನು ಮತ್ತು ಚೀಲವನ್ನು ಇಟ್ಟುಕೊಂಡಿದ್ದನು ಎಂದರೆ ಸರಿ. ಅದನ್ನು ಸಹಾ ನಮ್ಮ ರಾಜ್ಯಕ್ಕೆ ವಹಿಸಿಕೊಟ್ಟಿರುತ್ತಾರೆ ಎಂದರೆ ಸರಿ. ಮತ್ತೊಂದು ಬ್ಯಾಟರಿಯನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು :– ದೋಷಾರೋಪಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ವಕೀಲರು ಸಮಯ ಕೋರಿರುತ್ತಾರೆ, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ